ಹಿತ್ತಿಲ ಜಗುಲಿಯಲ್ಲಿ ಎಳೆ ಬಿಸಿಲು ಬೀಳುವ ಕಡೆ ಸ್ಥಾಪನೆಯಾಗಿದ್ದಳು ಪ್ರಭಾವತಿ. ಅಂಡಡಿಗೆ ಒಂದು ಮಣೆ. ದಿನಬಳಕೆಯ ಸೀರೆ ಬಿಚ್ಚಿ ಹಳೆಯ ಹತ್ತಿ ಸೀರೆ ಉಟ್ಟು ಸೆರಗನ್ನು ಬಿಗೀ ಹೊದ್ದು ಸೊಂಟಕ್ಕೆ ಸಿಕ್ಕಿಸಿಕೊಂಡಿದ್ದಳು. ಅರ್ಧಕ್ಕರ್ಧ ಬಿಳಿಯಾಗಿದ್ದ ಕೂದಲನ್ನು ಬಿರಿ ಹುಯ್ದುಕೊಂಡಿದ್ದಳು. ಪಕ್ಕದಲ್ಲಿದ್ದ ಮಧ್ಯಮಗಾತ್ರದ ಕಬ್ಬಿಣದ ಬಾಂಡ್ಲಿಯಲ್ಲಿ ಮೂರು ದಿನಗಳ ಹಿಂದೆ ಅರೆದು ಕಲೆಸಿಟ್ಟಿದ್ದ, ಫಕ್ಕನೆ ನೋಡಿದರೆ ಸಗಣಿಯಂತೆ ಭ್ರಾಂತಿ ಹುಟ್ಟಿಸುತ್ತಿದ್ದ ಮದರಂಗಿಯ ನುಣ್ಣನೆಯ ಮುದ್ದೆ. ‘ಅದ್ಯಾರೋ ಟೀವಿಯಲ್ಲಿ ಹೇಳಿದ್ದು ಹೌದೇ ಹೌದು. ಕಬ್ಬಿಣದ ಬಾಂಡ್ಲೀಲಿ ಮದರಂಗಿ ಕಲೆಸಿಟ್ಟರೆ ಕರಿಬಣ್ಣಕ್ಕೆ ತಿರುಗುತ್ತೆ’ ಎನ್ನುವ ವಿಷಯ ತಲೆಯಲ್ಲಿ ಗಿರಕಿ ಹೊಡೆಯುತ್ತಾ ಮುದಗೊಳಿಸುತ್ತಿತ್ತು. ಎಳೆ ಬಿಸಿಲು ನಚ್ಚಗೆ ಮೈಗೆ ಹಿತವಾಗಿದ್ದರೂ ಅರ್ಧಘಂಟೆಯಿಂದ ಗುಲಾಬಿಗೆ ಕಾಯುತ್ತಾ ಕೂತಿರುವುದು ಮನಸ್ಸಲ್ಲಿ ಇರಿಸುಮುರಿಸು. ಚಿತ್ರಾಂಗಿ ಅವಳಿಗೆ ಏನೋ ಕೆಲಸ ಹಚ್ಚಿ ಕೂರಿಸಿದ್ದಾಳೆ ಎಂದು ಸೊಸೆ ಸುಗುಣನ ಮೇಲೆ ಮುನಿಸು. ಅದಾಗಿದ್ದೂ ಹಾಗೇ. ಅತ್ತೆ ಮದರಂಗಿ ಕಲಾಪದ ತಯಾರಿ ನಡೆಸಿದಾಗಲೇ ಸುಗುಣನ ರಕ್ತದೊತ್ತಡ ಚೂರು ಹೆಚ್ಚು ಕಮ್ಮಿ ಆಗಿತ್ತು. ಕಡಿಮೆ ಅಂದರೂ ಅತ್ತೆಮ್ಮನ ಕೇಶೋಪಚಾರಕ್ಕೆ ಒಂದೊಂದೂವರೆ ಘಂಟೆ ಬೇಕು. ಗುಲಾಬಿ ಕೂಡಾ ಅಂಥದ್ದೇ ಮಂಗ. ಸಿಕ್ಕಿದ್ದೇ ಛಾನ್ಸು ಅಂದುಕೊಂಡು ಅಲ್ಲೇ ಕೂತು ಕಾಲಹರಣ ಮಾಡುತ್ತಾಳೆ. ಅರ್ಜೆಂಟಿಗೆ ಏನಾದರೂ ಕೆಲಸ ಆಗಬೇಕೆಂದರೆ ಆಗುವ ಪಂಚಾತಿಕೆ ಇಲ್ಲ. ಸಂದರ್ಭಗಳು ಅದು ಹೇಗೆ ತಾಳೆಯಾಗುತ್ತವೆ ಎಂದು ಸುಗುಣನಿಗೆ ಆಶ್ಚರ್ಯ. ಮನೆಗೆಲಸಗಳು ರಾಶಿ ಬಿದ್ದಿರುವ ದಿನವೇ ಅತ್ತೆಗೆ ಮದರಂಗಿ ಹಚ್ಚಿಸಿಕೊಳ್ಳಲು ಮುಹೂರ್ತ ಕೂಡಿ ಬಂದಿರುತ್ತದೆ. ಆಗಬೇಕಾದ ಹೊತ್ತಿಗೆ ಯಾವ ಕೆಲಸಗಳೂ ಆಗದೆ ಸುಗುಣನಿಗೆ ಮೈ ಪರಚಿಕೊಳ್ಳುವಂತಾಗುತ್ತದೆ. ‘ಮುಗೀತನೇ ನಿಂದು? ಬೇಗ ಬಾ...’ ಎಂದು ಅತ್ತೆ ಗುಲಾಬಿಗೆ ತಾಕೀತು ಮಾಡುವ ಮುನ್ನವೇ ಇವತ್ತು ಸುಗುಣ ಅವಳಿಗೆ ಹೇಳಿಟ್ಟಿದ್ದಳು,

“ಮೊದಲು ಮುಸುರೆಪಾತ್ರೆ ತೊಳೆದು ಆಮೇಲೆ ಎತ್ಲಾಗಾರೂ ಹಾಳಾಗಿ ಹೋಗು. ಅಡಿಗೆಮನೇಲಿ ಬೇಕಾದ ಪಾತ್ರೆ ಕೈಗೆ ಸಿಗ್ದಿದ್ರೆ ನಂಗೆ ತಲೇನೇ ಕೆಟ್ಹೋಗುತ್ತೆ...” ಹೂಂಗುಟ್ಟಿದ್ದ ಗುಲಾಬಿ ತನ್ನ ಸ್ವಭಾವಕ್ಕನುಗುಣವಾಗಿ ಯಥಾಸಾವಕಾಶವಾಗಿ ಹಿತ್ತಲ ಒಗದೆ ಬುಡದಲ್ಲಿ ಪಾತ್ರೆ ತೊಳೆಯುವುದರಲ್ಲಿ ನಿರತಳಾಗಿದ್ದಳು. ಮೂರೂ ಮತ್ತೊಂದು ಜನ ಇರುವ ಮನೆಯಲ್ಲಿ ಒಂದು ಗಾಡಿ ಪಾತ್ರೆ ತೊಳೆಯುವುದಕ್ಕೆ ಬೀಳುವುದು ಹೇಗೆ ಎಂದು ಪ್ರಭಾವತಿಗೆ ಆಶ್ಚರ್ಯ. ಪ್ರಭಾವತಿ, ಅವಳ ಮಗ, ಸೊಸೆ, ಚೋಟುದ್ದದ ಮೊಮ್ಮಗ. ಮನೆಯಲ್ಲಿರುವವರು ಇಷ್ಟೇ ಜನ. ಒಗದೆ ಕಲ್ಲಿನ ತುಂಬಾ ಇಟ್ಟಾಡಿರುತ್ತವೆ ಪಾತ್ರೆಗಳ ರಾಶಿ. ನೀರು ಕುಡಿದ ಲೋಟ ಕೂಡಾ ಗಲಬರಿಸಿಡದೆ ತೊಳೆಯಲು ಹಾಕಿದರೆ ಇನ್ನೇನು? ಪ್ರಭಾವತಿಯ ಸಹನೆ ಕುದಿ ಬಿಂದುವಿಗೆ ಏರುತ್ತಿತ್ತು. “ಇವತ್ತಿಗೆ ಮುಗಿಸ್ತೀಯಾ, ಇಲ್ವಾ?” ಕಣ್ಣೆದುರೇ ಅಷ್ಟು ದೂರದಲ್ಲಿ ಕುಕ್ಕರುಗಾಲಲ್ಲಿ ಕೂತು ಪಾತ್ರೆ ಬೆಳಗುತ್ತಿದ್ದವಳಿಗೆ ಒಂದು ಧಮಕಿ ಹಾಕಿದಳು ಪ್ರಭಾವತಿ.

“ಮುಗೀತು ಅಮ್ಮಾ. ಆಯ್ತು, ಬಂದೆ. ಬಂದೇಬಿಟ್ಟೆ...” ಪಾತ್ರೆ ತೊಳೆತೊಳೆದು ಒಗದೆ ಕಲ್ಲಿನ ಮೇಲೆ ಕವುಚಿಟ್ಟು ಗುಲಾಬಿ ಸೊಂಟಕ್ಕೆ ಎತ್ತಿ ಸಿಕ್ಕಿಸಿದ ಸೀರೆಯ ನೆರಿ ಬಿಚ್ಚಿ ಸರಿಮಾಡಿಕೊಳ್ಳುತ್ತಾ, ಸೀರೆಯ ಎರಡೂ ಬದಿಗೆ ಕೈ ವರೆಸಿಕೊಳ್ಳುತ್ತಾ ಪ್ರಭಾವತಿಯ ಹಿಂದೆ ಬಂದು ಕೂತಳು. ಮದರಂಗಿಯ ಮುದ್ದೆಗೆ ಕೈ ಹಾಕಿ ಪ್ರಭಾವತಿಯ ಹೊರೆಗೂದಲನ್ನು ಎಳೆಎಳೆಯಾಗಿ ವಿಂಗಡಿಸಿ ಮದರಂಗಿ ಬಳಿಯಲು ಅಣಿಯಾದಳು. ಕುತ್ತಿಗೆಯ ಬಳಿ ಆಡಿದ ಅವಳ ಕೈ ತಣ್ಣಗೆ ಕೊರೆಯುತ್ತಾ ಪ್ರಭಾವತಿಗೆ ಕಚಗುಳಿ ಕೊಟ್ಟಂತಾಯ್ತು. ಸುಗುಣ ಯಾವತ್ತೂ ಹೇಳುವುದಿದೆ,

“ಅದ್ಯಾತಕ್ಕೆ ಮದರಂಗಿ ಬಳ್ಕೊಂಡು ಗಂಟೆಗಟ್ಲೆ ಕೂತ್ಗಂಡಿರ್ತೀರಿ ಅತ್ತೆ? ಬಿಳಿಕೂದಲು ಕೆಂಪಗೆ ಎದ್ದು ಕಾಣುತ್ತೆ. ಬೇಕೂಂತಾದ್ರೆ ಹೇರ್ ಡೈ ತಂದ್ಕೊಡ್ತಾರೆ ನಿಮ್ಮಗ. ಹಚ್ಕೊಂಡ್ರೆ ಬಿಳಿಕೂದಲು